6

# “ಕರ್ತನ ಮಂದಿರದ ಬೆಟ್ಟ”

*“ಅಂತ್ಯಕಾಲದಲ್ಲಿ ಯೆಹೋವನ ಮಂದಿರದ ಬೆಟ್ಟವು ಗುಡ್ಡ ಬೆಟ್ಟಗಳಿಗಿಂತ ಉನ್ನತೋನ್ನತವಾಗಿ ಬೆಳೆದು ನೆಲೆಗೊಳ್ಳುವದು, ...” (ಯೆಶಾಯ 2:2).*

ದೇವರ ವ್ಯಕ್ತಿತ್ವ, ಗುಣಲಕ್ಷಣ ಮತ್ತು ಚಿತ್ತದ ಬಗ್ಗೆ ಸ್ಪಷ್ಟವಾಗಿ ಹೆಚ್ಚಾದದ್ದನ್ನು ತಿಳಿದುಕೊಳ್ಳುವದನ್ನು ಆತನ ವಾಕ್ಯವಾದ, ಬೈಬಲಿನಿಂದ ಕಲಿತುಕೊಳ್ಳಬಹುದು. ಹೀಗಿದ್ದರೂ ಈ ಸತ್ಯವು, ಆತನ ಇತರ ಪುಸ್ತಕವನ್ನು - ಆತನ ಜಗತ್ತು, ಸೃಷ್ಟಿಯ ಪುಸ್ತಕ - ಓದುವದರಿಂದ ಅರ್ಥಮಾಡಿಕೊಳ್ಳಬಹುದಾದ ದೇವರ ಬಗೆಗಿನ ಸಮಾನ್ಯ ಸತ್ಯಗಳ ಮಹತ್ವವನ್ನು ಕಡೆಗಣಿಸಲಿಕ್ಕೆ ಕಾರಣವಾಗಬಾರದು.

ನಮ್ಮ ಸುತ್ತಲೂ ಇರುವ ಜಗತ್ತಿನಿಂದ ನಮಗೆ ಬರವ ದೇವರ ಒಂದು ಗುಣಲಕ್ಷಣವು ಆತನು ಸುಂದರವಾದ ಸಂಗತಿಗಳನ್ನು ಪ್ರೀತಿಸುತ್ತಾನೆ ಎಂಬುದು. ಅದನ್ನು ನಾವು ಸುಂದರವಾದ ನವಿಲುಗಳಲ್ಲಿಯೂ ಕೆಳಗಿನ ಹಚ್ಚ ಹಸಿರು ದನಗಳಿಂದ ತುಂಬಿದ ಮತ್ತು ಮೇಲ್ಗಡೆ ನೀಲಿ ವಾತಾವರಣದ ದೃಶ್ಯಗಳಿಂದ ಕೂಡಿದ ಹಿಮಾಚ್ಛಾದಿತ ಪರ್ವತಗಳ ವೈಭವದಲ್ಲಿಯೂ ನಾವು ನೋಡುತ್ತೇವೆ. ಕಪ್ಪು ವೆಲ್ವೆಟ್ ಬ್ಲಾಂಕೇಟ್‌ಗೆ ಎದುರಿನಲ್ಲಿ ವಜ್ರಗಳಂತೆ ಹೊಳೆಯುವ ನಕ್ಷತ್ರಗಳೊಂದಿಗೆ ಕತ್ತಲೆಯಾದ ಆಕಾಶದಿಂದ ಇದು ಘೋಷಿಸಲ್ಪಡುವುದು. ಇದು ಭೂಲೋಕದ ಎಲ್ಲಾ ಬಣ್ಣಗಳ ಆಕಾರಗಳ ಹೂವುಗಳಿಂದ, ತೋಟಗಳನ್ನು, ಬೆಟ್ಟಗಳನ್ನು, ಕೊಳ್ಳಗಳನ್ನು ಮತ್ತು ಹುಲ್ಲುಗಾವಲುಗಳನ್ನು ಅಲಂಕರಿಸುವ ಲೈಲಾಕ್, ಗುಲಾಬಿ, ನೈದಿಲ್, ಓರ್ಚಿಡ್ಸ ಮತ್ತು ಇತರ ಬಗೆಯ ಹೂವುಗಳಲ್ಲಿ ಕಾಣುತ್ತದೆ. ನಮ್ಮ ಜಗತ್ತಿನ ಈ ವಿಶೇಷವಾದ ಲಕ್ಷಣಗಳನ್ನು ಯೋಚಿಸಿ, ದೇವರಿಗೆ ಆಕರ್ಷಣೀಯವಾದದ್ದರ, ಸುಂದರವಾದದ್ದರ ಕಡೆಗೆ ಮೆಚ್ಚಿಕೆಯಿರುವುದು ಎಂದು ತೀರ್ಮಾನಿಸಲಿಕ್ಕೆ ಯಾರೂ ನಡಿಸಲ್ಪಡಲಿಕ್ಕಿಲ್ಲ?

ದೇವರ ಈ ಲಕ್ಷಣವು ಭೌತಿಕ ಜಗತ್ತಿನಲ್ಲಿ ಪ್ರತ್ಯಕ್ಷವಾಗಿರುವದಷ್ಟೇ ಅಲ್ಲ, ಆತ್ಮಿಕವಲಯದಲ್ಲಿಯೂ ಸಹ ಕಂಡುಬರುತ್ತದೆ. ಗಮನಿಸುವದರಿಂದ, ಹಾಗೆಯೇ ಪರಿಶುದ್ಧ ಬರಹಗಳಿಂದ, ದೇವರ ಅನುದಿನದ, ಕೃಪೆಯ ನಿರಂತರ ಕಾರ್ಯವು ಜಯಶಾಲಿ ಪ್ರಾಣಗಳನ್ನು ಸೃಷ್ಟಿಸುವುದು ಎಂಬುದನ್ನು ನಾವು ಕಲಿತು ಕೊಳ್ಳಬಹುದು. ಆತನು ಸುಂದರವಾದ *ಸಂಗತಿಗಳನ್ನು* ಪ್ರೀತಿಸುತ್ತಾನೆ ಎಂಬುದು ಸತ್ಯವಾಗಿದೆ, ಆದರೆ ಆತನು ಸುಂದರವಾದ *ಜನರನ್ನು* ಪ್ರೀತಿಸುತ್ತಾನೆ ಎಂಬುದು ಇನ್ನೂ ದೊಡ್ಡ ಸತ್ಯವಾಗಿರುತ್ತದೆ. ದೇವರು ಪಾಪಿಯನ್ನು ಪ್ರೀತಿಸುತ್ತಾನೆ, ಆದರೆ ಯಾರೋ ಒಬ್ಬರು ಹೇಳಿದಂತೆ, “ಆತನು ಅವನನ್ನು ಅವನಿದ್ದಂತೆ ಬಿಡದಷ್ಟು ಪ್ರೀತಿಸುತ್ತಾನೆ.” ತನ್ನ ಕರುಣೆಯಲ್ಲಿ ದೇವರು ಯೇಸುವಿನ ಮುಖಾಂತರ ಪಾಪಿಯನ್ನು ಒಬ್ಬ ಆಕರ್ಷಣೀಯ ವಾದ, ಕ್ರಿಸ್ತನಂತಿರುವ ವ್ಯಕ್ತಿಯನ್ನಾಗಿ ಪುನಃ ರೂಪಿಸಲು ತಲುಪುತ್ತಾನೆ.

ದೇವರ ಈ ಗುಣಲಕ್ಷಣದ ಬೆಳಕಿನಲ್ಲಿ, ಪರಿಶುದ್ಧಾತ್ಮನು ಪ್ರವಾದನೆಯಲ್ಲಿ

ಇಸ್ರಾಯೇಲಿನ ಭವಿಷ್ಯವನ್ನು - ಸಭೆಯನ್ನು - ಸರಿಗಟ್ಟಲಾಗದ ಆತ್ಮಿಕ ಸೌಂದರ್ಯ ಹಾಗೂ ಸೊಬಗಿನೊಂದಿಗೆ ಅಲಂಕರಿಸಲ್ಪಟ್ಟ ಕರ್ತನ ಮಹಿಮೆಯುಳ್ಳ ಮನೆಯಂತೆ ಚಿತ್ರೀಕರಿಸಿದ್ದರಲ್ಲಿ ನಮಗೆ ಆಶ್ಚರ್ಯವಾಗುವುದಿಲ್ಲ (ಯೆಶಾಯ 2:2-4). ಆತನ ಚಿತ್ರದಲ್ಲಿ ಸಭೆಯು ಒಂದು ತಂಪಾದ, ಕಲ್ಲಿನ ಕಟ್ಟಡವಾಗಿರುವುದಿಲ್ಲ, ಆದರೆ ಅದನ್ನು ನೋಡುವ ಜನಸಮೂಹಗಳ ಹೃದಯಗಳನ್ನು ಅದರ ಆಕರ್ಷಣೆಯೊಂದಿಗೆ ಸೆರೆ ಹಿಡಿಯುವ ಸಜೀವ ಪರ್ವತವಾಗಿದೆ.

ಯೆಶಾಯನಲ್ಲಿಯ ಈ ವಾಕ್ಯಭಾಗವು ಸಭೆಗೆ ಉಲ್ಲೇಖವಾಗಿರುವುದಿಲ್ಲ, ಆದರೆ ಬಬಿಲೋನಿನ ಸೆರೆಯವಾಸದ ನಂತರ ಯೆರೂಸಲೇಮು ಪುನಃ ಕಟ್ಟಲ್ಪಡುವುದರ ಬಗ್ಗೆ ಮುಂತಿಳಿಸುವಿಕೆಯಾಗಿದೆ ಎಂದು ವಾದಿಸಬಹುದು. ಬಹುಶಃ ಪ್ರವಾದನೆಗೆ ದ್ವಂದ್ವ ಅರ್ಥವಿರುತ್ತದೆ: ಒಂದು *ಆ ದಿನಕ್ಕಾಗಿ* - ಸೆರೆಯ ನಂತರ ಯೆರೂಸಲೇಮಿನ ಭೌತಿಕ ಪುನಃ ಕಟ್ಟುವಿಕೆ - ಮತ್ತು ಒಂದು *ದೂರದ ದಿನಕ್ಕಾಗಿ* - ಪಂಚಾಶತ್ತಮ ದಿನದಂದು ಸಭೆಯ ಸ್ಥಾಪನೆ. ಹೀಗಿದ್ದರೂ ಯೆಶಾಯನ ಪುಸ್ತಕದಲ್ಲಿ, ಈ ಪ್ರವಾದನೆಯ 2ನೆಯ ವಚನದಲ್ಲಿ. "ಕೊನೆಯ ದಿನಗಳು" ಎಂಬ ಮಾತಿಗೆ ಅನ್ವಯಿಸಲು ಯಾವುದೇ ನಿರ್ದಿಷ್ಟ ಪುರಾವೆಯು ಕಂಡುಕೊಳ್ಳಲ್ಪಟ್ಟಿಲ್ಲ. ಯೆರುಬ್ಬಾಬೇಲ, ಎಜ್ರ ಮತ್ತು ನೆಹೆಮೀಯರ ಸಮಯದಲ್ಲಿ ಭೌತಿಕ ಯೆರೂಸಲೇಮಿನ ಪುನಃ ಕಟ್ಟುವಿಕೆಗೆ ಅದನ್ನು ಸುಮ್ಮನೇ ಅನ್ವಯಿಸುವುದು, ಹಳೇ ಮತ್ತು ಹೊಸ ಒಡಂಬಡಿಕೆಗಳೆರಡರಲ್ಲಿಯ ಸಭೆಯ ಬಗೆಗಿನ ಸಾಮಾನ್ಯ ಬೋಧನೆಯ ಬೆಳಕಿನಲ್ಲಿ ಅನಧಿಕೃತವಾದದ್ದಾಗಿದೆ. "ಕಡೆಯ ದಿನಗಳಲ್ಲಿ" ಎಂಬ ಮಾತು, ಕ್ರೈಸ್ತಯುಗದ ಪ್ರಾರಂಭವನ್ನು ಸಂಘಟಿಸುವ ಒಂದು ಘಟನೆಯ ಪ್ರವಾದನೆಯನ್ನು ಸಂಕೇತಿಸುತ್ತದೆ. ಮುಂತಿಳಿಸುವಿಕೆಯು, ಒಂದು ದಿನ ಭವಿಷ್ಯದ ಎಲ್ಲಾ ಸಂತತಿಯವರು ಯೆರೂಸಲೇಮಿನ ಕಡೆಗೆ ಹಿಂದಿರುಗಿ ನೋಡುವರು, ಅದಕ್ಕೆ ಕಾರಣ ಅಲ್ಲಿ ಸಂಭವಿಸಿದ ಕಾರ್ಯ, ಸಭೆಯ ಪ್ರಾರಂಭವಾಗಿರುತ್ತದೆ. ಯೇಸುವಿನ ಪುನರುತ್ಥಾನದ ನಂತರದ ಪಂಚಾಶತ್ತಮ ದಿನದಂದು, "ಕೊನೆಯ ದಿನಗಳು," ಕ್ರೈಸ್ತ ಯುಗವು, ಪವಿತ್ರಾತ್ಮನ ಸುರಿಸುವಿಕೆಯಿಂದ ಮತ್ತು ಸಭೆಯ ಸ್ಥಾಪನೆಯಿಂದ ಪ್ರಾರಂಭವಾಗಿತ್ತೆಂದು ಪೇತ್ರನು ವಿವರಿಸಿದನು (ಅಪೊಸ್ತಲರ ಕೃತ್ಯಗಳು 2:16-21).

ಯೆಶಾಯನಿಂದ ಈ ಪ್ರವಾದನೆಯನ್ನು (ಪ್ರಸಂಗಿಕವಾಗಿ, ಮೀಕ 4:1-3ರಲ್ಲಿ ಮಾಡಲ್ಪಟ್ಟ ಈ ಹೇಳಿಕೆಯನ್ನು) ಸಭೆಯ ಬರೋಣವನ್ನು ಮತ್ತು ವೈಭವವನ್ನು ನಾವು ನೋಡಬಹುದಾದ ಪ್ರವಾದಿಕ ಕನ್ನಡಕವಾಗಿದೆಯೆಂದು ಒಪ್ಪಿಕೊಳ್ಳೋಣ. ಈ ವಾಕ್ಯಭಾಗವನ್ನು ಬರಲಿಕ್ಕಿದ್ದ ರಾಜ್ಯದ, ಸಭೆಯ ಗೌರವದ ಪ್ರವಾದನೆಯಂತೆ ತಿಳಿಯೋಣ, ಗುಣಲಕ್ಷಣವನ್ನು ಹೊಸ ಒಡಂಬಡಿಕೆಯ ಬೋಧನೆಯೊಂದಿಗೆ ಸಮರ್ಥಿಸೋಣ.

ಸಭೆಯ ಸೌಂದರ್ಯವನ್ನು ಯೆಶಾಯನು ಹೇಗೆ ವಿವರಿಸಿದನು?

## ಅದರ ಪ್ರಸಿದ್ಧಿಯ ಮುಖಾಂತರ

ಮೊದಲನೆಯದಾಗಿ, ಯೆಶಾಯನು ಸಭೆಯ ಸೌಂದರ್ಯವನ್ನು ಅದು ತಿಳಿದುಕೊಳ್ಳುವ ಪ್ರಸಿದ್ಧಿಯ ಮುಖಾಂತರ ಚಿತ್ರಿಸಿದನು, "ಅಂತ್ಯಕಾಲದಲ್ಲಿ ಯೆಹೋವನ ಮಂದಿರದ ಬೆಟ್ಟವು ಗುಡ್ಡ ಬೆಟ್ಟಗಳಿಗಿಂತ ಉನ್ನತೋನ್ನತವಾಗಿ ಬೆಳೆದು ನೆಲೆಗೊಳ್ಳುವದು, ಆಗ ಸಕಲ ದೇಶಗಳವರು ಅದರ ಕಡೆಗೆ ಪ್ರವಾಹಗಳಂತೆ ಬರುವರು" (ಯೆಶಾಯ 2:2) ಎಂದು ಅವನು ಬರೆದನು. ಭೂಲೋಕದ ಎಲ್ಲಾ ದೇಶಗಳವರು ಸಭೆಯ ಉತ್ತಮವಾದ ಗುಣಗಳನ್ನು ಗುರುತಿಸುವರು ಮತ್ತು ಅದರ ಕಡೆಗೆ ಎಳೆಯಲ್ಪಡುವರು.

ಸಭೆಯು ಸಾಂಕೇತಿಕವಾಗಿ ಯೆರೂಸಲೇಮಿನ ಬೆಟ್ಟದ ಮೇಲಿರುವ ಕರ್ತನ

ಮನೆಯಂತೆ ತೋರಿಸಲ್ಪಟ್ಟಿದೆ. ಆ ಮನೆಯ ಪ್ರಕಾಶವು ಎಲ್ಲಾ ದೇಶಗಳವರ ಮೆಚ್ಚಿಕೆಯನ್ನು ಪಡೆದುಕೊಂಡು, ಅವರು ಪರ್ವತದ ಕಡೆಗೆ ಬಂದು, ಅದನ್ನೇರುವಂತೆ ಮಾಡುವುದು. ಈ ಪರ್ವತವು, ದೇವರ ಉದ್ದೇಶಗಳಿಗೆ ಅದರ ಸಂಬಂಧದ ಕಾರಣದಿಂದ, ಇತರ ಎಲ್ಲಾ ಪರ್ವತಗಳ ಮೇಲೆ ಉನ್ನತಕ್ಕೇರಿಸಲ್ಪಡುವುದು ಎಂದು ಯೆಶಾಯನು ಹೇಳಿದನು.

ಹೊಸ ಒಡಂಬಡಿಕೆಯು ಸಭೆಯ ಜಾಗತಿಕ ಆಕರ್ಷಣೆಯನ್ನು ಪ್ರಕಟಿಸುತ್ತದೆ. ಯೇಸುವು ರಾಜ್ಯದ ಬಗ್ಗೆ ಹೇಳಿದಾಗ ಅದರ ವಿಶ್ವವ್ಯಾಪಿ ಆಕರ್ಷಣೆಯನ್ನು ಮುಂತಿಳಿಸಿದನು: "... ಮೂಡಣ ಪಡುವಣ ದಿಕ್ಕುಗಳಿಂದ ಬಹಳ ಜನ ಬಂದು ಪರಲೋಕ ರಾಜ್ಯದಲ್ಲಿ ಅಬ್ರಹಾಮ್ ಇಸಾಕ್ ಯಾಕೋಬ್ ಎಂಬವರ ಸಂಗಡ ಊಟಕ್ಕೆ ಕೂಡ್ರುವರು" (ಮತ್ತಾಯ 8:11).

ಯೆರೂಸಲೇಮ ನಾಶನದ ಬಗ್ಗೆ ಒಲೀವ ಸಂಭಾಷಣೆಯಲ್ಲಿ, ಸುವಾರ್ತೆ ವ್ಯಾಪ್ತಿಯನ್ನು ವಾಗ್ದಾನ ಮಾಡಿದರು: "ಇದಲ್ಲದೆ ಪರಲೋಕರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು" (ಮತ್ತಾಯ 24:14). ಸತ್ತವರೊಳಗಿಂದ ತನ್ನ ಪುನರುತ್ಥಾನದ ನಂತರ, ಯೇಸುವು ಸುವಾರ್ತೆಯ ವಿಶ್ವ ವ್ಯಾಪಿ ಸುವಾರ್ತಾ ಘೋಷಣೆಯ ಬಗ್ಗೆ ಆಜ್ಞಾಪಿಸಿದನು: "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15). ಪಂಚಾಶತ್ತಮದ ದಿನದಂದು ಸುವಾರ್ತೆಯು ಮೊದಲು ಪ್ರಸಂಗಿಸಲ್ಪಟ್ಟಾಗ, "ಆಕಾಶದ ಕೆಳಗಿರುವ ಎಲ್ಲಾ ದೇಶದವರೊಳಗಿಂದ ಬಂದ ಸದ್ಭಕ್ತರು" ಅದನ್ನು ಕೇಳಿದರು ಮತ್ತು ಅದಕ್ಕೆ ವಿಧೇಯರಾದರು (ಅಪೊಸ್ತಲರ ಕೃತ್ಯಗಳು 2:5, 9-11). ಬಹುಶಃ "ಎಲ್ಲಾ ಜನರಿಗಾಗಿ" ಆ ದೇಶವು ಕೊಡಲ್ಪಟ್ಟ ತರುವಾಯ ಮೂವತ್ತು ವರ್ಷಗಳ ನಂತರ ಪೌಲನು ಕೊಲೊಸ್ಸೆಯದವರಿಗೆ ಹೀಗೆ ಬರೆಯಲು ಶಕ್ತನಾದನು, "ನೀವು ಕೇಳಿದಂಥ ಆಕಾಶದ ಕೆಳಗಿರುವ *ಸರ್ವ ಸೃಷ್ಟಿಗೆ ಸಾರಲ್ಪಟ್ಟಂಥ ಸುವಾರ್ತೆಯಿಂದ* ಉಂಟಾದ ನಿರೀಕ್ಷೆಯನ್ನು ಬಿಟ್ಟು ತೊಲಗಿ ಹೋಗದೆ ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವದಾದರೆ ಆ ಪದವಿ ನಿಮಗೆ ಪ್ರಾಪ್ತವಾಗುವದು. ಪೌಲನೆಂಬ ನಾನು ಈ ಸುವಾರ್ತೆಗೆ ಸೇವಕನಾದೆನು" (ಕೊಲೊಸ್ಸೆ 1:23; ಒತ್ತಿ ಹೇಳಿದ್ದು ನನ್ನದು).

ಪ್ರಕಟನೆ 5:9ರಲ್ಲಿಯ ದೇವರ ಸಿಂಹಾಸನದ ಬಳಿಯಲ್ಲಿ ಕೇಳಲ್ಪಟ್ಟ ನೂತನ ಸಂಗೀತವು, ಯಜ್ಞದ ಕುರಿಯಾದಾತನ ರಕ್ತದ ಮುಖಾಂತರ ಪ್ರತಿಯೊಂದು ದೇಶದ ಪ್ರತಿಯೊಂದು ಜನಾಂಗದಿಂದ ಬಂದ ಜನರ ರಕ್ಷಣೆಯಲ್ಲಿ ಆನಂದಿಸುವ ಸ್ತೋತ್ರಗೀತವಾಗಿದೆ, "ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವುದಕ್ಕೆ ಯೋಗ್ಯನೇ; ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡು" ಎಂದು ಪರಲೋಕ ಸಮೂಹಗಳು ಹಾಡುತ್ತಲಿರುವವು. ಜಗತ್ತಿನಲ್ಲೆಲ್ಲಾ ಇರುವ ಜನರು ಕ್ರೈಸ್ತ ಯುಗದ ಸಮಯದಲ್ಲಿ ಸುವಾರ್ತೆಯಿಂದ ಮತ್ತು ಸಭೆಯಿಂದ ಪ್ರೋತ್ಸಾಹಿಸಲ್ಪಡುವರು ಎಂದು ಬೇರೆ ಮಾತಿನಲ್ಲಿ ಹೇಳಬಹುದು.

ಕೆಲವು ವರ್ಷಗಳ ಹಿಂದೆ, ಹಾರ್ಡಿಂಗ್ ಯುನಿವರ್ಸಿಟಿಯ ಹೋವಾರ್ಡ್ ಹೋರ್ಟನ್ ಅವರು ನಮ್ಮ ಸಂದರ್ಶಕ ಮಿಶನರಿಯಾಗಿ ಬಂದಿದ್ದರು. ಅವರು ಪ್ರಭಾವಿತರನ್ನಾಗಿ ಮಾಡುವ ಒಂದು ಉದಾಹರಣೆಯನ್ನು ಉಪಯೋಗಿಸಿದ್ದನ್ನು ಕೇಳಿದ್ದನ್ನು ನಾನು ಜ್ಞಾಪಿಸಿಕೊಳ್ಳತ್ತೇನೆ: ಅನೇಕ ದೇಶಗಳಲ್ಲಿ ಅವರು ಮಿಶನರಿಯಾಗಿ ಸೇವೆ ಮಾಡಿದ್ದರು ಮತ್ತು ಅವರು ಹೋದಲ್ಲೆಲ್ಲಾ ಪ್ರತಿಯೊಂದು ಸ್ಥಳದಲ್ಲಿ ಜನರಿಗೆ ದೇವರಲ್ಲಿ ನಂಬಿಕೆಯು

ಯೋಗ್ಯವಾಗಿರುವದನ್ನು ಕಂಡುಕೊಂಡಿದ್ದರು. ಅವರು ಅದನ್ನು ಗಣಿತ - ಬೋಧಿಸುವುದಕ್ಕೆ ಹೋಲಿಸಿದ್ದರು. ಜಗತ್ತಿನಲ್ಲೆಲ್ಲಾ ಚಿಕ್ಕ ಮಕ್ಕಳಿಗೆ ಎರಡು ಎರಡು ಕೂಡಿಸಿದರೆ ನಾಲ್ಕು ಆಗುತ್ತದೆ ಎಂದು ಬೋಧಿಸುವಾಗ, ಅವರ ಮನಸ್ಸುಗಳಲ್ಲಿ ಏನೋ ಒಂದು ಹೊಳೆಯುತ್ತದೆ ಮತ್ತು ಅವರು "ಅದು ಸರಿ, ಅದೇ ಸತ್ಯವಾಗಿದೆ" ಎಂದು ಹೇಳುತ್ತಾರೆ. ಅದೇ ರೀತಿಯಲ್ಲಿ ಸರ್ವಶಕ್ತನಾದ ದೇವರು ಜಗತ್ತನ್ನೂ ಮನುಷ್ಯನನ್ನೂ ಸೃಷ್ಟಿಸಿದನು, ಆತನು ಮನುಷ್ಯರನ್ನು ಪ್ರೀತಿಸುವನು ಮತ್ತು ಆತನು ಮನುಷ್ಯನನ್ನು ರಕ್ಷಿಸಲು ಬಯಸುವನು ಎಂದು ಜನರಿಗೆ ಬೋಧಿಸಲ್ಪಡುವಾಗ, ಅವರ ಮನಸ್ಸುಗಳಲ್ಲಿಯ ಯಾವುದೋ ಒಂದು ಆ ನಂಬಿಕೆಯನ್ನು ಸ್ವೀಕರಿಸುತ್ತದೆ ಮತ್ತು ಅವರು "ಅದು ಸರಿಯಾಗಿದೆ. ಅದು ನಿಶ್ಚಯವಾಗಿಯೂ ಸತ್ಯವಾಗಿದೆ" ಎಂದು ಹೇಳುತ್ತಾರೆ.

---

*ಸಭೆಯು ಅಲಂಕಾರಿಕವಾಗಿ*
*ಯೆರೂಸಲೇಮಿನಲ್ಲಿ ಪರ್ವತದ ಮೇಲೆ*
*ಇರುವ ಕರ್ತನ ಮನೆಯಂತೆ ಚಿತ್ರಿಸಲ್ಪಟ್ಟಿದೆ.*
*ಮನೆಯ ಪ್ರಕಾಶವು*
*ಎಲ್ಲಾ ಜನಗಳ ಮೆಚ್ಚಿಕೆಯನ್ನು*
*ಸೆಳೆಯುವುದು, ಮತ್ತು ಅವರು*
*ಪರ್ವತದ ಬಳಿಗೆ ಬಂದು, ಅದನ್ನು ಏರುವರು.*

---

ಈ ಭವ್ಯಸ್ವರೂಪವು ಸಭೆಯ ಬಗ್ಗೆ ನಿತ್ಯವಾದದ್ದಾಗಿದೆ. ಸಭೆಯ ಆಕರ್ಷಕ ಗುಣಕ್ಕೆ ಸಾಕ್ಷಿಕೊಡುವ ದೇವರ ವಾಕ್ಯದ ಪುರಾವೆಗೆ ಕೂಡಿಸಿ, ನಮ್ಮ ಸ್ವಂತ ಹೃದಯಗಳ ಅದೇ ರೀತಿಯ ತೀರ್ಪು ನಮ್ಮಲ್ಲಿರುತ್ತದೆ, ಜಗತ್ತಿನ ಯಾವುದೇ ಭಾಗದಲ್ಲಿಯ ಜನರಿಗೆ ಹೊಸ ಒಡಂಬಡಿಕೆಯ ಸಭೆಯ ಬಗ್ಗೆ ಬೋಧಿಸಲ್ಪಡುವಾಗ, ಅವರ ಮನಸ್ಸುಗಳಲ್ಲಿ ಯಾವುದೋ ಒಂದು, "ಅದು ಸರಿಯಾಗಿದ್ದಿರ ಬೇಕು" ಎಂಬ ಒಪ್ಪಿಕೊಳ್ಳುವಿಕೆಯಿಂದ ಉತ್ತರಿಸಲ್ಪಡುತ್ತದೆ. ಸಭೆಯ ಕಡೆಗೆ ಇರುವ ಜನರ ಸಂಬಂಧವು ಸಮಾಂತರವಿಲ್ಲದ್ದಾಗಿರುತ್ತದೆ; ಅದನ್ನು ಗಮನಿಸುವುದು ಆಶ್ಚರ್ಯಕರವಾದದ್ದಾಗಿರುತ್ತದೆ. ಸಭೆಯು ಏನಾಗಿದೆ ಎಂಬುದನ್ನು ಜನರು ಅರ್ಥಮಾಡಿಕೊಳ್ಳುವಾಗ, ಅವರು ಅದರ ಬಳಿಗೆ ಹೊರಗಿನ ಬೆಳಕಿನ ಪ್ರಕಾಶಕ್ಕೆ ಬೇಸಿಗೆ ನೊಣಗಳು ಹಾರಿ ಬರುವಂತೆ ಬರುತ್ತಾರೆ. ಜಗತ್ತಿನಲ್ಲೆಲ್ಲಾ ಜನರು ಹೊಸ ಒಡಂಬಡಿಕೆಯ ಸಭೆಯನ್ನು ಮೆಚ್ಚಿಕೊಳ್ಳುವರು.

ಸ್ವಲ್ಪ ಯೋಚನೆಯೊಂದಿಗೆ, ಸಭೆಯ ಪ್ರಸಿದ್ಧಿಯನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತದೆ. ಜನರು ಯೇಸುವಿನ ರಕ್ತದಿಂದ ರಕ್ಷಿಸಲ್ಪಡುವಾಗ, ಮತ್ತು ನಿತ್ಯ ಜೀವವನ್ನು ಹೊಂದಿಕೊಳ್ಳುವಾಗ, ಕ್ರಿಸ್ತನ ದೇಹದಂತೆ ಅವರು ಜೀವಿಸುವರು, ಕಾರ್ಯಮಾಡುವರು ಮತ್ತು ಒಂದಾಗಿ ದೇವರನ್ನು ಅರಾಧಿಸುವರು. ಅವರು ಕ್ರಿಸ್ತನ ಹೆಸರನ್ನು ಧರಿಸಿಕೊಳ್ಳುವರು ಮತ್ತು ಪರಲೋಕದಲ್ಲಿ ನಿತ್ಯವಾದ ಮಹಿಮೆಯನ್ನು ಎದುರು ನೋಡುವರು. ಅವರು ಒಬ್ಬರನ್ನೊಬ್ಬರು ಪ್ರೀತಿಸುವರು ಮತ್ತು ರಕ್ಷಕನನ್ನು ಅರಿಯದೇ ಇರುವವರಿಗೆ ರಕ್ಷಣೆಯ ಸಂದೇಶವನ್ನು ತರುವುದಕ್ಕಾಗಿ ಹುಡುಕುವರು, ಆತನ ಸಭೆಯಾಗಿರುವುದು ನಿಶ್ಚಯವಾಗಿಯೂ ಅದ್ಭುತಕರವಾದದ್ದಾಗಿದೆ! ಭೂಲೋಕದ ಎಲ್ಲಾ ಕುಲಗಳು, ಜನಾಂಗಗಳು, ಗೋತ್ರಗಳು ಮತ್ತು ಕುಟುಂಬಗಳು ಸಭೆಯ ಮೌಲ್ಯವನ್ನು ನೋಡಿ, ಅದರ ಕಡೆಗೆ ಹರಿದು ಬರುವಲ್ಲಿ ಆಶ್ಚರ್ಯವೇನೂ ಇರುವದಿಲ್ಲ.

## ಅದರ ಪ್ರಸಂಗಿಸುವಿಕೆಯ ಮುಖಾಂತರ

ಎರಡನೆಯದಾಗಿ, ಯೆಶಾಯನು ಸಭೆಯ ಮಹಿಮೆಯು ಅದರ ಪ್ರಸಂಗಿಸುವಿಕೆಯಲ್ಲಿ ಕಂಡು ಬರುತ್ತದೆ ಎಂದು ಹೇಳಿದ್ದಾನೆ. ಅವನು ಹೀಗೆ ಬರೆದನು,

> ಹೊರಟು ಬಂದ ಬಹು ಜನಾಂಗದವರು - ಬನ್ನಿರಿ, ಯೆಹೋವನ ಪರ್ವತಕ್ಕೆ, ಯಾಕೋಬ್ಬರ ದೇವರ ಮಂದಿರಕ್ಕೆ, ಹೋಗೋಣ! ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು, ನಾವು ಆತನ ದಾರಿಗಳಲ್ಲಿ ನಡೆಯುವೆವು ಎಂದು ಹೇಳುವರು. ಏಕಂದರೆ ಚೀಯೋನಿನಿಂದ ಧರ್ಮೋಪದೇಶವೂ ಯೆರೂಸಲೇಮಿನಿಂದ ಯೆಹೋವನ ವಾಕ್ಯವೂ ಹೊರಡುವವು (ಯೆಶಾಯ 2:3).

ಯೆರೂಸಲೇಮಿನಲ್ಲಿ ಕರ್ತನ ಮನೆಯಿಂದ, ಕರ್ತನ ವಾಕ್ಯವು, ಸುವಾರ್ತೆಯು ಹೊರಡುವ ಒಂದು ದಿನವನ್ನು ದೇವರ ಆತ್ಮನಿಂದ ದರ್ಶಿಸಲ್ಪಟ್ಟಿತು.

ಕರ್ತನ ನಿಯಮವನ್ನು ಸ್ವೀಕರಿಸಲು ಜನರು ಯೆರೂಸಲೇಮಿನಲ್ಲಿಯ ಕರ್ತನ ಮನೆಗೆ ಬರುವರು. ಅವರು ನಿಯಮದಿಂದ ಜೀವಿಸತಕ್ಕದ್ದು ಮತ್ತು ಕರ್ತನ ಮಾರ್ಗಗಳಲ್ಲಿ ನಡೆಯುವದಕ್ಕಾಗಿ ಯೆರೂಸಲೇಮಿನಿಂದ ಹೊರಟು ಹೋಗಬೇಕು ಎಂಬುದನ್ನು ತಿಳಿದು ಕೊಂಡು ಬರುವರು. "ಕೊನೆಯ ದಿನಗಳು" ಪ್ರಾರಂಭಿಸಿದಾಗ, ಪ್ರತಿಯೊಬ್ಬನೂ ನೂತನ ಯುಗಕ್ಕಾಗಿ ಪ್ರಾರಂಭದ ಸ್ಥಳದಂತೆ ಯೆರೂಸಲೇಮಿನ ಕಡೆಗೆ ನೋಡುವನು ಎಂಬುದನ್ನು ಸೂಚಿಸುತ್ತ ಯೆರೂಸಲೇಮಿನ ಮೇಲೆ ಒತ್ತುಕೊಡಲ್ಪಟ್ಟಿದೆ: "... ಏಕೆಂದರೆ ಚೀಯೋನಿನಿಂದ ಧರ್ಮೋಪದೇಶವೂ ಯೆರೂಸಲೇಮಿನಿಂದ ಯೆಹೋವನ ವಾಕ್ಯವೂ ಹೊರಡುವವು."

ಹೊಸ ಒಡಂಬಡಿಕೆಯಲ್ಲಿ ಯೇಸುವು ಯೆರೂಸಲೇಮನ್ನು ಸಭೆಯ (ಇಲ್ಲವೇ ಕ್ರೈಸ್ತ) ಯುಗದ ಪ್ರಾರಂಭದ ಸ್ಥಳದಂತೆ ನೇಮಕ ಮಾಡಿದನು, ಅಪೊಸ್ತಲರಿಗೆ ಕೊಟ್ಟ ತನ್ನ ಅದೇಶದಲ್ಲಿ ಆತನು ಹೀಗೆ ಹೇಳಿದನು,

> ಕ್ರಿಸ್ತನು ಶ್ರಮೆಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದು ಬರುವನೆಂತಲೂ ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂಬ ಮಾತು *ಯೆರೂಸಲೇಮು ಮೊದಲುಗೊಂಡು* ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲೂ ಬರೆದದೆ. ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿದ್ದೀರಿ. ಇಗೋ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ (ಲೂಕ 24:46-49; ಒತ್ತಿ ಹೇಳಿದ್ದು ನನ್ನದು).

ಅದರಂತೆಯೇ, ತನ್ನ ದಿವಾರೋಹಣದ ಮೊದಲು, ಯೇಸುವು ತನ್ನ ಅಪೊಸ್ತಲರು ಪರಿಶುದ್ಧಾತ್ಮನ ಬರುವಿಕೆಗಾಗಿ ಯೆರೂಸಲೇಮಿನಲ್ಲಿ ಇರಬೇಕೆಂದು ಉಪದೇಶ ಮಾಡಿದನು. "ಆತನು ಅವರೊಂದಿಗೆ ಕೂಡಿದ್ದಾಗ್ಗೆ ... ನೀವು ಯೆರೂಸಲೇಮನ್ನು ಬಿಟ್ಟುಹೋಗದೆ ತಂದೆ ವಾಗ್ದಾನ ಮಾಡಿದಂಥದ್ದಕ್ಕೆ ... ಕಾದುಕೊಂಡಿರ್ರಿ, ..." (ಅಪೊಸ್ತಲರ ಕೃತ್ಯಗಳು 1:4) ಎಂದು ಹೇಳಿದನೆಂದು ಲೂಕನು ಬರೆದನು. ಹತ್ತು ದಿನಗಳ ನಂತರ ಪರಿಶುದ್ಧಾತ್ಮನು ಅಪೊಸ್ತಲರ ಮೇಲೆ ಪರಲೋಕದಿಂದ ಸುರಿಸಲ್ಪಟ್ಟನು,

ಪರಿಶುದ್ಧಾತ್ಮನಲ್ಲಿ ಅವರು ಬಾಪ್ತಿಸ್ಮ ಹೊಂದಿದರು, ಹೀಗೆ "ಕೊನೆಯ ದಿನಗಳು" ಪ್ರಾರಂಭವಾಯಿತು (ಅಪೊಸ್ತಲರ ಕೃತ್ಯಗಳು 2:1-4, 16-21). ಈ ಸುರಿಸುವಿಕೆಯ ದಿನದಂದು ಉತ್ಥಾನವಾದ ಕ್ರಿಸ್ತನ ಸುವಾರ್ತೆಯನ್ನು ಪೇತ್ರನು ಪ್ರಸಂಗಿಸಿದಾಗ, ರೋಮನ್ ಜಗತ್ತಿನ ಭಿನ್ನವಾದ ದೇಶಗಳಿಂದ ಬಂದ ಮೂರು ಸಾವಿರ ಜನರು ಸಂದೇಶವನ್ನು ಸ್ವೀಕರಿಸಿದರು, ನಂಬಿದರು, ಮಾನಸಾಂತರ ಪಟ್ಟರು ಮತ್ತು ತಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಮಾಡಿಸಿಕೊಂಡರು (ಅಪೊಸ್ತಲರ ಕೃತ್ಯಗಳು 2:41, 47). ಕರ್ತನ ವಾಕ್ಯವು ಅಪೊಸ್ತೊಲಿಕ ಪ್ರಸಂಗಿಸುವಿಕೆಯ ಮುಖಾಂತರ ಯೆರೂಸಲೇಮಿನಿಂದ ಹೊರಗೆ ಹೋಯಿತು, ಮತ್ತು ಎಲ್ಲಾ ರೋಮನ್ ಸಾಮ್ರಾಜ್ಯದೊಳಗಿನ ಜನರು ಕರ್ತನ ಮಾರ್ಗದಲ್ಲಿ ನಡೆಯಲು ಪ್ರಾರಂಭಿಸಿದರು.

ಈ ಜಗತ್ತಿನಲ್ಲಿ ನಿಜವಾಗಿಯೂ ಯಾವುದು ಬೆಲೆಯುಳ್ಳದ್ದಾಗಿದೆ? ಹಣವನ್ನು ಸಂಗ್ರಹಿಸುವುದೋ? ಜ್ಞಾನವನ್ನು ಪಡೆದುಕೊಳ್ಳುವುದೋ? ಜಾಗತಿಕ ಮಟ್ಟದ ಗೌರವ ಪಡೆದುಕೊಳ್ಳುವುದೋ? ಹೆಚ್ಚಿನ ಮಟ್ಟಿಗೆ, ನಮ್ಮಲ್ಲಿ ಯಾರೂ ಇವುಗಳಲ್ಲಿ ಯಾವುದನ್ನೂ ಜೀವನದ ಅತ್ಯುನ್ನತ ಗುರಿಯೆಂದು ತೋರಿಸಲಾರೆವು. ಇಂದಿನಿಂದ ಒಂದು ನೂರು ವರ್ಷಗಳಾದ ನಂತರ ನಮ್ಮಲ್ಲಿ ಯಾರೂ ಈ ಸಾಧನೆಗಳಿಂದ ಲಾಭ ಹೊಂದುವುದಿಲ್ಲವೆಂಬುದು ಸುಲಭ ಕಾರಣದಿಂದ ಸತ್ಯವಾಗಿರುತ್ತದೆ. ಅವುಗಳಿಗೆ ಮಿತಿಯುಳ್ಳ ಬೆಲೆಯಿರುತ್ತದೆ, ಯಾಕಂದರೆ ಅವುಗಳ ಬೆಲೆಯು ಸಮಯಕ್ಕೆ ಕಟ್ಟಲ್ಪಟ್ಟಿರುತ್ತದೆ. ಹೀಗಿದ್ದರೂ, ದೇವರ ವಾಕ್ಯಕ್ಕೆ ನಮ್ಮ ವಿಧೇಯತೆಯು ಸಮಯವನ್ನು ದಾಟಿ ತಲುಪುತ್ತದೆ ಮತ್ತು ಕರ್ತನಿಂದ "ಚೆನ್ನಾಗಿ ಮಾಡಿದೆ" ಎಂಬುದನ್ನು ಹಾಗೂ ನಿತ್ಯವಾದ ಸ್ವಾಗತವನ್ನು ಸ್ವೀಕರಿಸಲು ನಿತ್ಯತ್ವದೊಳಗೆ ನಮ್ಮನ್ನು ಒಯ್ಯುತ್ತದೆ (1 ಯೋಹಾನ 2:16). ದೇವರ ವಾಕ್ಯವನ್ನು ಬೋಧಿಸುವವರು ತಾವು ಬೋಧಿಸುತ್ತಿರುವವರಿಗೆ ಅತ್ಯುನ್ನತ ಉಪಕಾರ ಮಾಡಿದ್ದಾರೆ, ಯಾಕಂದರೆ ನಿತ್ಯ ಜೀವಕ್ಕಾಗಿ ಅವರು ಅವರಿಗೆ ಒಂದು ಅವಕಾಶವನ್ನು ಕೊಟ್ಟಿದ್ದಾರೆ.

ದೇವರ ವಾಕ್ಯವನ್ನು ಪ್ರಸಂಗಿಸುವುದು ಯಾವಾಗಲೂ ಸಭೆಯ ಸೇವೆಯಾಗಿದೆ, ಕ್ರೈಸ್ತರು ನಮ್ಮ ಕರ್ತನಂತೆ, ದಯಾಪರರೂ, ಅನುಕಂಪವುಳ್ಳವರೂ ಮತ್ತು ಪಾಲನೆ ಮಾಡುವವರೂ ಆಗಿರತಕ್ಕದ್ದು; ಆದರೆ ಆತನು ಮಾಡಿದಂತೆ, ನಮ್ಮ ಮುಖಾಂತರ ಹಾಗೂ ನಮ್ಮಿಂದ ಭೂಲೋಕದ ಎಲ್ಲಾ ಕಡೆಗೆ ಸುವಾರ್ತೆಯು ಹೋಗುವಂತೆ ನೋಡಿಕೊಳ್ಳುವದರ ಕಡೆಗೆ ಕೇಂದ್ರೀಕರಿಸಬೇಕು. ಸಭೆಯು "ಸತ್ಯದ ಸ್ಥಂಭವೂ ಆಧಾರವೂ" ಎಂದು ಪೌಲನು ಹೇಳಿದನು (1 ತಿಮೊಥೆ 3:15). ಪೇತ್ರನು ವಿಮೋಚಿತರನ್ನು, ನಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ "ಗುಣಾತಿಶಯಗಳನ್ನು" ಪ್ರಚುರ ಮಾಡಬೇಕೆಂದು ಒತ್ತಾಯಪಡಿಸಿದನು (1 ಪೇತ್ರ 2:9). ಸಭೆಯನ್ನು ನಾವು ಮಾನವತೆಯ ಸಮುದ್ರದೊಳಗೆ ಸುವಾರ್ತೆಯ ಹುಡುಕುವ ಬೆಳಕನ್ನು ಹೊರಗೆ ಕಳುಹಿಸುವ ಲೈಟ್ ಹೌಸಿಗೆ ಹೋಲಿಸಬಹುದು. ನಮ್ಮ ಪ್ರಸಂಗಿಸುವಿಕೆಯ ಮುಖಾಂತರ ಭೂಲೋಕದ ಜನರಿಗೆ ನಾವು ಹೊರಗೆ ಕಳುಹಿಸುವ ಬೆಳಕು, ವೈಯಕ್ತಿ ಬೋಧನೆಯು, ಅಚ್ಚಾದ ಸಂದೇಶಗಳು ಮತ್ತು ಕ್ರಿಸ್ತನಿಗಾಗಿ ಅನುದಿನವು ಜೀವಿಸುವುದು ಸುವಾರ್ತೆಯಾಗಿದೆ, ಅವರ ಪ್ರಾಣಗಳನ್ನು ರಕ್ಷಿಸಬಲ್ಲ ಕೇವಲ ಸಂದೇಶವಾಗಿದೆ (ರೋಮಾಪುರ 1:16).

ಸಭೆಯು ತನ್ನ ಸೇವೆಯ ಕಾರಣದಿಂದ ಮಹಿಮೆಯುಳ್ಳದ್ದಾಗಿದೆಯೆಂದು ಯೆಶಾಯನು ಹೇಳಿದನು. ಎಲ್ಲಾ ಜನರಿಗೆ ನಿತ್ಯವಾದ ಸುವಾರ್ತೆಯನ್ನು ಪ್ರಸಂಗಿಸುವ ದೈವಿಕ ಕಾರ್ಯಕ್ಕೆ ತನ್ನನ್ನು ಸಮರ್ಪಿಸಿಕೊಂಡಿರುವ ಭೂಲೋಕದಲ್ಲಿಯ

ಒಂದೇ ಸಂಘಟನೆಯಾಗಿದೆ. ಪ್ರಸಂಗಿಸುವಿಕೆಯ ಶ್ರೇಷ್ಠಪಡಿಸುವಿಕೆಯ ಮತ್ತು ಸಂಧಾನಪಡಿಸುವಿಕೆಯ ಪರಿಣಾಮದ ಕಾರಣದಿಂದ ಪೌಲನು ಯೆಶಾಯನನ್ನು ಉಲ್ಲೇಖಿಸಿ, "ಶುಭದ ಸುವಾರ್ತೆಯನ್ನು ಸಾರುವವರ ಪಾದಗಳು ಎಷ್ಟೋ ಅಂದವಾಗಿವೆ!" ಎಂದು ಹೇಳಿದನು (ರೋಮಾಪುರ 10:15ಬಿ; ನೋಡಿರಿ ಯೆಶಾಯ 52:7). ಅವನ ಮಾತುಗಳನ್ನು ನಾವು ಸ್ವೀಕರಿಸಿಕೊಂಡು, "ಭೂಲೋಕದ ಎಲ್ಲಾ ಕಡೆಗಳಿಗೆ ಕರ್ತನ ವಾಕ್ಯವನ್ನು ಕಳುಹಿಸುವ ತನ್ನ ಉನ್ನತವಾದ ಸೇವೆಗಾಗಿ ಸಭೆಯು ಎಷ್ಟು ಅಂದವಾಗಿದೆಯಲ್ಲವೇ" ಎಂದು ಹೇಳಬಹುದು. ಸಭೆಯ ಈ ಅದ್ವಿತೀಯ ಲಕ್ಷಣವನ್ನು ಯಾರು ಕಳೆದು ಕೊಳ್ಳುವರು?

## ಅದರ ಸಮಾಧಾನದ ಪ್ರಚಾರಣೆಯ ಮುಖಾಂತರ

ಮೂರನೆಯದು, ಸಭೆಯು ಸುಂದರವಾದದ್ದಾಗಿದೆ ಅದಕ್ಕೆ ಕಾರಣ ಸಮಾಧಾನದ ಅದರ ಪ್ರಚಾರಣೆಯಾಗಿರುವುದು, ಯೆಶಾಯನು ಹೇಳಿದ್ದಾನೆ,

> ಆತನು ದೇಶದೇಶಗಳ ವ್ಯಾಜ್ಯಗಳನ್ನು ವಿಚಾರಿಸುವನು. ಬಹು ರಾಷ್ಟ್ರದವರಿಗೆ ನ್ಯಾಯತೀರಿಸುವನು; ಅವರೋ ತಮ್ಮ [ಆಯುಧಗಳನ್ನು] ಕುಲುಮೆಗೆ ಹಾಕಿ ಕತ್ತಿಗಳನ್ನು ಗುಳಗಳನ್ನಾಗಿಯೂ ಬರ್ಜಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡುವರು; ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದು, ಇನ್ನು ಯುದ್ಧಾಭ್ಯಾಸವು ನಡೆಯುವದೇ ಇಲ್ಲ (ಯೆಶಾಯ 2:4).

ಬೇರೆ ಮಾತುಗಳಲ್ಲಿ, ಸಭೆಯಲ್ಲಿ ಭೂಮಿಯ ಮೇಲೆ ಸಮಾಧಾನವು ನೆಲೆಗೊಳ್ಳುವುದು ಎಂದು ಹೇಳಬಹುದು.

ತಮ್ಮ ಜೀವಿತಗಳ ಮೇಲೆ ದೇವರ ಪ್ರಭಾವದ ಮುಖಾಂತರ ಎಲ್ಲಾ ಜನಾಂಗಗಳ ಜನರು ಸಮಾಧಾನದಲ್ಲಿ ಒಂದಾಗಿ ವಾಸಿಸುವದನ್ನು ಯೆಶಾಯನು ತನ್ನ ಪ್ರವಾದನೆಯಲ್ಲಿ ನೋಡಿದನು. ಅವರು ಪ್ರವೇಶಿಸುವ ಸಭೆಯು, ದೇವರ ರಾಜ್ಯವು, ಒಪ್ಪಂದದ ಮತ್ತು ಸಮಾಧಾನದ ಸ್ಥಳವಾಗಿರುವುದಿಲ್ಲ. ಹೋರಾಟದ, ಭಿನ್ನಾಭಿಪ್ರಾಯಗಳ ಯುದ್ಧದ ಗುಂಪುಗಳಾಗಿ ಅವು ವಿಭಾಗವಾಗಿ ಹೋಗುವುದಿಲ್ಲ, ಆದರೆ ಆತ್ಮದ ಮುಖಾಂತರ ಏಕತೆಯಲ್ಲಿ ಒಂದಾಗಿ ಬೆಸೆಯಲ್ಪಡುವರು. ಯುದ್ಧದ ಆಯುಧಗಳು ಶಾಂತಿ ಸಮಾಜದ ಉತ್ಪಾದನೆಯ ಸಲಕರಣೆಗಳಾಗಿ ಮಾರ್ಪಡಿಸಲ್ಪಡುವವು.

ಹೊಸ ಒಡಂಬಡಿಕೆಯನ್ನು ಓದುವುದರಲ್ಲಿ, ಒಬ್ಬನು "ಸಮಾಧಾನ" ಎಂಬ ಪದದ ವಿಪುಲತೆಯನ್ನು ನೋಡದೇ ಇರುವುದಿಲ್ಲ. ದೇವರು "ಸಮಾಧಾನದ ದೇವರು" ಆಗಿದ್ದಾನೆ (ರೋಮಾಪುರ 15:33). ಯೇಸುವು ಸಮಾಧಾನವನ್ನು ತರಲಿಕ್ಕೆ ಬಂದನು. ಆತನ ಜನನದ ಸಮಯದಲ್ಲಿ ದೇವದೂತರು ಹೀಗೆ ಹಾಡಿದರು: "ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ, ದೇವರು ಅವರಿಗೆ ಒಲಿಯುತ್ತಾನೆ" (ಲೂಕ 2:14). ಸುವಾರ್ತೆಯು "ಸಮಾಧಾನದ ಸೂವಾರ್ತೆ" ಆಗಿರುತ್ತದೆ (ಎಫೆಸ 6:15). ಕ್ರಿಸ್ತನು ತನ್ನ ಶಿಷ್ಯರನ್ನು ಸಮಾಧಾನ ಪಡಿಸುವವರಂತೆ ಮರೆಯಲಾಗದ ಧನ್ಯವಾಚಕದೊಂದಿಗೆ ಕಳುಹಿಸಿದನು: "ಸಮಾಧಾನ ಪಡಿಸುವವರು ಧನ್ಯರು; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು" (ಮತ್ತಾಯ 5:9). ತನ್ನ ಅಪೊಸ್ತಲರಿಗೆ ಆತನ ಅಂತಿಮ ಮಾತುಗಳು ಸಮಾಧಾನದ ಪ್ರತಿಫಲಕೊಡುವ ಮಾತುಗಳಾಗಿದ್ದವು: "ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ, ನನ್ನಲ್ಲಿರುವಂಥ

ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಲ್ಲ; ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ" (ಯೋಹಾನ 14:27).

ಬಾಪ್ತಿಸ್ಮ ಹೊಂದಿದ ವಿಶ್ವಾಸಗಳ ಸ್ಥಳಿಕ ಸಮುದಾಯದಂತೆ ಸಭೆಯ ಬಗ್ಗೆ ಪರಿಶುದ್ಧಾತ್ಮನಿಂದ ಕೊಡಲ್ಪಟ್ಟ ಮೊದಲನೆಯ ಚಿತ್ರವು ವಿವಿಧ ದೇಶಗಳಿಂದ ಬಂದ ಆದರೆ ಕ್ರಿಸ್ತನ ಮುಖಾಂತರ ಒಂದೇ ಮನಸ್ಸಿನಿಂದ ಒಂದಾಗಿ ವಾಸಿಸುತ್ತಿದ್ದ ಜನರ ಸಮುದಾಯವಾಗಿದೆ: "ನಂಬಿದವರೆಲ್ಲರೂ ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಿದ್ದರು" (ಅಪೊಸ್ತಲರ ಕೃತ್ಯಗಳು 2:44). "ಏಕ ಮನಸ್ಸಿನಿಂದ" ಅವರು ದಿನಾಲೂ ಮುಂದರಿದಿದ್ದರು (ಅಪೊಸ್ತಲರ ಕೃತ್ಯಗಳು 2:46).

ನಮ್ಮ ಮನಸ್ಸು ಗ್ರಹಿಸಿಕೊಳ್ಳಬಹುದಾದ ಅತ್ಯಂತ ಸುಂದರವಾದ ಗುಣಗಳಲ್ಲಿ ಒಂದು ನಿಜವಾದ ಸಮಾಧಾನ - ದೇವರ ಮತ್ತು ಮನುಷ್ಯನ ಮಧ್ಯದಲ್ಲಿ, ಮಾನವ ಮತ್ತು ಮಾನವನ ಮಧ್ಯದಲ್ಲಿ, ಹಾಗೂ ನಮ್ಮ ಸ್ವಂತ ಹೃದಯಗಳಲ್ಲಿ ಸಮಾಧಾನವು ಆಗಿರುತ್ತದೆ, ಬೇರಾವುದೂ ಅದಕ್ಕೆ ಬದಲಾಗಿ ಇರುವುದಿಲ್ಲ. ನಮ್ಮ ಜಗತ್ತು ತೊಂದರೆಗಳಿಗೆ ಒಳಗೊಂಡ ಸ್ಥಳವಾಗಿದೆ - ಭಯದಿಂದ, ದುರಾಗ್ರಹದಿಂದ ಮತ್ತು ಹೋರಾಟದಿಂದ ತೊಂದರೆಪಡಿಸಲ್ಪಟ್ಟು, ಹೃದಯದ ದ್ವೇಷದಿಂದ ಮತ್ತು ಭಾರದಿಂದ ಪೀಡಿಸಲ್ಪಟ್ಟಿರುವ ಸ್ಥಳವಾಗಿದೆ. ಇಂಥ ಜಗತ್ತಿನಲ್ಲಿ ಸಮಾಧಾನದ ಸ್ಥಳವು ಅಸ್ತಿತ್ವದಲ್ಲಿರುವುದೋ? ಹೌದು. ಸಭೆಯು ಆ ಸ್ಥಳವಾಗಿದೆ ಎಂದು ಹೊಸ ಒಡಂಬಡಿಕೆಯು ಹೇಳುತ್ತದೆ.

ಒಬ್ಬ ಸಂಶೋಧಕನು ಒಂದು ವಿಶೇಷ ಹಡಗನ್ನು ಕಟ್ಟಿಸಲು ಬಯಸಿದ್ದರ ಬಗ್ಗೆ ನಾನು ಓದಿದ್ದೇನೆ. ಹಡಗು ಬಿರುಗಾಳಿಗೆ ಸಿಕ್ಕಿ ಅಪ್ಪಳಿಸಲ್ಪಡುವಾಗಲೂ ಅದರೊಳಗೆ ಇರುವ ಒಂದು ಕೋಣೆಯು ಪರಿಪೂರ್ಣವಾಗಿ ಯಾವಾಲೂ ಸ್ಥಿರವಾಗಿರಬೇಕೆಂದು ಹೇಳಿದನು. ಪ್ರಕ್ಷುಬ್ಧ ಸ್ಥಿತಿಯ ಮಧ್ಯದಲ್ಲಿ, ಒಂದು ಸಮಾಧಾನದ ಸ್ಥಳವು ಆ ವಿಶೇಷ ವಾಗಿ ರೂಪಿಸಿದ ಕೋಣೆಯಲ್ಲಿ ಸಿಕ್ಕಬೇಕು, ಅವನ ಉದ್ದೇಶವು ಏನಾಯಿತೆಂಬುದರ ಬಗ್ಗೆ ನನಗೆ ತಿಳಿದಿರುವುದಿಲ್ಲ, ಆದರೆ ಸತತವಾಗಿ ಶಾಂತವಾಗಿರುವ ಕೋಣೆಯ ಬಗೆಗಿನ ಅವನ ವಿಚಾರವು ಸಭೆಯ ಪರಿಪೂರ್ಣ ಚಿತ್ರವಾಗಿದೆ, ಯುದ್ಧದಿಂದ ಜಜ್ಜಲ್ಪಟ್ಟ, ಹೋರಾಟದಿಂದ ತುಂಬಿದ, ಮತ್ತು ಕೋಪದಿಂದ ತಳ್ಳಲ್ಪಡುತ್ತಿರುವ ಜಗತ್ತಿನಲ್ಲಿ ಸಭೆಯು ಸಮಾಧಾನದ ಸ್ಥಳವಾಗಿದೆ.

ಕ್ರಿಸ್ತನ ದೇಹದಲ್ಲಿ ಮಾತ್ರವೇ ಒಬ್ಬನು ನಿಜವಾದ ಸಮಾಧಾನವನ್ನು ಪಡೆಯ ಬಲ್ಲನು, ನಿಜವಾದ ಸಮಾಧಾನವಿರಲು, ನಾವು ಪಾಪದಿಂದ ರಕ್ಷಣೆಯಲ್ಲಿ ದೇವರೊಂದಿಗೆ ನಾವು ಸಮಾಧಾನದಲ್ಲಿ ಮೊದಲು ಬರಬೇಕು (ರೋಮಾಪುರ 5:1); ಅನಂತರ ನಾವು ಇತರರೊಂದಿಗೆ ಸಮಾಧಾನವನ್ನು ಹುಡುಕ ಬೇಕು (ರೋಮಾಪುರ 12:18; ಮತ್ತಾಯ 5:23-25); ಆಮೇಲೆ ಅದರ ಪರಿಣಾಮವಾಗಿ, ನಾವು ನಮ್ಮ ತೊಂದರೆಗಳನ್ನು ದೇವರ ಬಳಿಗೆ ತರುವಾಗ, ನಮ್ಮ ಆತ್ಮಗಳೊಳಗೆ ಸಮಾಧಾನವು ಕೊಡಲ್ಪಡುವುದು (ಫಿಲಿಪ್ಪಿ 4:6, 7). ಈ ರೀತಿಯ ಸಮಾಧಾನವು ಕ್ರಿಸ್ತನ ಮುಖಾಂತರ ಮಾತ್ರವೇ ಬರುವುದು. ಸಮಾಧಾನವು ಆತ್ಮಿಕವಾದದ್ದೂ ರಕ್ಷಣಾತ್ಮವಾದದ್ದೂ ಆಗಿರುವುದು ಕೇವಲ ಮನೋವಿಜ್ಞಾನದ್ದಾಗಲೀ, ದೈಹಿಕವಾದದ್ದಾಗಲೀ ಇಲ್ಲವೇ ಸಮಾಜಿಕವಾದ ದ್ದಾಗಲೀ ಆಗಿರುವುದಿಲ್ಲ, ಯೆಶಾಯನು ಸಮಾಧಾನದ ಮಾತುಗಳಲ್ಲಿ ಸಭೆಯನ್ನು ಚಿತ್ರಿಸಿದ್ಧರಲ್ಲಿ ಆಶ್ಚರ್ಯವಿರುವುದಿಲ್ಲ.

# ಮುಕ್ತಾಯ

ಸಭೆಯು ರಕ್ತದಿಂದ ಕೊಂಡುಕೊಂಡ ದೇಹವಾಗಿದೆ, ದೇವರ ಮಹಿಮೆ ಮತ್ತು ಜ್ಞಾನದೊಂದಿಗೆ ಹೊಳೆಯುವಂಥದ್ದಾಗಿದೆ, ಪರ್ವತಗಳಲ್ಲಿ ಮುಖ್ಯವಾದದ್ದರಂತೆ ಅದು ಇತರ ಬೆಟ್ಟಗಳಿಗಿಂತ ಮೇಲೇಳುತ್ತದೆ. ಎಲ್ಲಾ ಜನಾಂಗಗಳು ಅದರ ದೊಡ್ಡಸ್ತಿಕೆಯನ್ನು ನೋಡಿರುತ್ತವೆ ಮತ್ತು ಅದರೊಳಗೆ ಪ್ರವಾಹವಾಗಿ ಹೋಗಿವೆ. ಅದಕ್ಕಿರುವ ಪ್ರಸಿದ್ಧಿಯಲ್ಲಿ ಅದರ ಸೊಗಸು ಕಾಣಲ್ಪಟ್ಟಿದೆ. ಅದು ಮಾಡುವ ಪ್ರಸಂಗಿಸುವಿಕೆಯಲ್ಲಿ, ಮತ್ತು ಅದು ಪ್ರೋತ್ಸಾಹಿಸುವ ಸಮಾಧಾನದಲ್ಲಿ ತೋರಿಬರುತ್ತದೆ, ಅದಕ್ಕೆ ಭೂಲೋಕದ ಮೇಲೆ ಅತೀ ಅರ್ಥಗರ್ಭಿತವಾದ ಸೇವೆಯಿರುತ್ತದೆ; ಅದು ಕರ್ತನ ನಿಯಮವನ್ನು ಲೋಕದೊಳಗೆಲ್ಲಾ ಕಳುಹಿಸುತ್ತದೆ, ದೇವರು ಅದರೊಳಗೆ ತನ್ನ ಸಮಾಧಾನವನ್ನು ಇಡುವುದರಿಂದ ಭೂಲೋಕದ ಎಲ್ಲಾ ಸಾಹಸ ಕಾರ್ಯಗಳ ಮೇಲೆ ಎಬ್ಬಿಸಿದ್ದಾನೆ.

ಸಭೆಯ ನಿಜವಾದ ಬೆಳೆಯನ್ನು ನೀವು ನೋಡಿದ್ದೀರೋ ಮತ್ತು ಅದಕ್ಕೆ ಆಕರ್ಷಿಸಲ್ಪಟ್ಟಿದ್ದೀರೋ? ಅದನ್ನು ಪ್ರವೇಶಿಸಲು ನೀವು ಸಿದ್ಧರಿರುವಿರೋ? "ಬನ್ನಿರಿ, ಯೆಹೋವನ ಪರ್ವತಕ್ಕೆ, ಯಾಕೋಬರ ದೇವರ ಮಂದಿರಕ್ಕೆ ಹೋಗೋಣ; ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು, ನಾವು ಆತನ ದಾರಿಗಳಲ್ಲಿ ನಡೆಯುವೆವು" ಎಂದು ನಿಮ್ಮ ಹೃದಯಗಳಲ್ಲಿ ಹೇಳಿಕೊಂಡಿರುವಿರೋ? ನೀವು ಈಗ ಪ್ರಾರಂಭಿಸಿದರೆ ಅದು ಇನ್ನೂ ತಡವಾಗಿರುವುದಿಲ್ಲ. ನೀವು ಕರ್ತನ ನಿಯಮವನ್ನು ಕಲಿಯ ಬಹುದು, ಕ್ರಿಸ್ತನ ದೇಹವನ್ನು ಪ್ರವೇಶಿಸಬಹುದು, ಆತನ ಮಾರ್ಗಗಳಲ್ಲಿ ನಡೆಯ ಬಹುದು, ಮತ್ತು ಆತನು ಕೊಡುವ ಸಮಾಧಾನವನ್ನು ತಿಳಿಯ ಬಹುದು.

ಜೀವನದ ಕ್ಯಾಲೆಂಡರಿನ ಮೇಲೆ ಕೇವಲ ಮೂರು ದಿನಗಳಿವೆ: ನಿನ್ನೆ, ಈ ಹೊತ್ತು ಮತ್ತು ನಾಳೆ. ನಿನ್ನೆಯ ದಿನವು ಕಳೆದು ಹೋಗಿದೆ ಮತ್ತು ಉಪಯೋಗಕ್ಕೆ ಬಾರದ ಕೋಟಿನಂತೆ ಇಲ್ಲವೇ ದಿನಾಂಕ ಮೀರಿದ ವೃತ್ತಪತ್ರಿಕೆಯಂತೆ ತೆಗೆದು ಹಾಕಲ್ಪಡತಕ್ಕದ್ದು. ನಾಳೆಯ ದಿನವು ಕೇವಲ ಒಂದು ವಾಗ್ದಾನ, ಬರಲಿಕ್ಕಿದ್ದ ಸಾಧ್ಯವಾದ ಸಂಗತಿಗಳ ಒಂದು ಕನಸು, ಏನಾಗಬಹುದೆಂಬ ಮಂದವಾದ ರೂಪ. ಈ ದಿನವು ಮಾತ್ರವೇ ನೀವು ಕಾರ್ಯ ಮಾಡಬಹುದಾದ ಕ್ಯಾಲಂಡರಿನ ಮೇಲಿನ ದಿನ. ನಿನ್ನೆಯ ದಿನದಿಂದ ನಾವು ಕಲಿಯಬಹುದು ಮತ್ತು ನಾವು ನಾಳೆಯ ದಿನವನ್ನು ಮುನ್ನೋಡ ಬಹುದು, ಆದರೆ ನಾವು ಕಾರ್ಯ ಮಾಡಬಹುದಾದದ್ದು ಇಂದಿನ ಕ್ಷಣ ಮಾತ್ರವೇ. ಇದಕ್ಕನುಗುಣವಾಗಿ, ಪೌಲನು, "ಈಗಲೇ ಆ ಸುಪ್ರಸನ್ನತೆಯ ಕಾಲ; ಇದೇ ಆ ರಕ್ಷಣೆಯ ದಿನ" ಎಂದು ಬರೆದನು (2 ಕೊರಿಂಥ 6:2). ನಂಬಿಕೆಯ (ಯೋಹಾನ 8:24), ಮಾನಸಾಂತರದ (ಅಪೊಸ್ತಲರ ಕೃತ್ಯಗಳು 17:30, 31), ಯೇಸುವಿನ ಅರಿಕೆ (ರೋಮಾಪುರ 10:10), ಮತ್ತು ಯೇಸುವಿನಲ್ಲಿ ಬಾಪ್ತಿಸ್ಮ (ರೋಮಾಪುರ 6:3), ಇವುಗಳ ಮುಖಾಂತರ ಇಂದು ಕರ್ತನ ಮನೆಯನ್ನು ಪ್ರವೇಶಿಸಿರಿ (1 ತಿಮೊಥೆ 3:15). ಸಭೆಯು ಮಹಿಮೆಯುಳ್ಳ ದೇಹವಾಗಿರುವುದನ್ನು ನೀವು ಗುರುತಿಸುವಿರೋ?

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಯಾವ ಎರಡು ಪುಸ್ತಕಗಳನ್ನು ದೇವರು ನಮಗೆ ಕೊಟ್ಟಿದ್ದಾನೆ? ಪ್ರತಿಯೊಂದರಿಂದ ನಾವು ಹೇಗೆ ಕಲಿತುಕೊಳ್ಳುತ್ತೇವೆಂಬದನ್ನು ವಿವರಿಸಿರಿ.
2. ದೇವರು ಪಾಪಿಯನ್ನು ಹೇಗೆ ಪ್ರಾರ್ಥಿಸುವನು ಮತ್ತು ಹೀಗಿದ್ದರೂ ಅವನು ಬದಲಾಗುವದನ್ನು ಹೇಗೆ ಕೇಳುವನು?
3. ಯೆಶಾಯ 2:2-4, ದ್ವಂದ್ವ ಪ್ರವಾದನೆಯಾಗಿರಬಹುದು ಎಂದು ಹೇಳಿದಾಗ ಅದರ ಅರ್ಥ ಏನಾಗುವುದು?
4. ಎಲ್ಲಾ ಜನರಿಗೆ ಸಭೆಯ ಆಕರ್ಷಣೆಯನ್ನು ವಿವರಿಸಿರಿ.
5. ಸಭೆಗೆ ವಿಶ್ವವ್ಯಾಪಿ ಆಕರ್ಷಣೆಯಿದೆ ಎಂಬ ವಿಚಾರವನ್ನು ಪ್ರತಿಪಾದಿಸಲು ನೀವು ಯಾವ ಪರಿಶುದ್ಧ ಬರಹವನ್ನು ಉಪಯೋಗಿಸುವಿರಿ?
6. ಯೆರೂಸಲೇಮ ಸಭೆಯ ಪ್ರಾರಂಭದ ಸ್ಥಳವಾಗುವುದು ಎಂದು ಯೇಸು ತೋರಿಸಿದ ಪರಿಶುದ್ಧ ಬರಹಗಳನ್ನು ಹೇಳಿರಿ.
7. ಇಂದು ಒಬ್ಬನು ಕರ್ತನ ಮಾರ್ಗಗಳಲ್ಲಿ ಹೇಗೆ ನಡೆಯಬಹುದು?
8. ಜಗತ್ತಿನಲ್ಲಿ ಯಾವುದು ನಿಜವಾಗಿಯೂ ಬೆಲೆಯುಳ್ಳದ್ದಾಗಿದೆ?
9. ಯೇಸುವು ತನ್ನ ಸಭೆಗೆ ಕೊಟ್ಟ ನಿಜವಾದ ನಿಯೋಗವನ್ನು ಚರ್ಚಿಸಿರಿ.
10. ನಿಜವಾದ ಸಮಾಧಾನವು ಹೇಗೆ ತರಲ್ಪಡುತ್ತದೆ?
11. ಸಭೆಯನ್ನು ಯೆಶಾಯನು ಸಮಾಧಾನದ ರಾಜ್ಯದಂತೆ ಯಾಕೆ ಚಿತ್ರಿಸುತ್ತಾನೆ?
12. ನಿಜವಾದ ಸಮಾಧಾನವು ಎಲ್ಲಿ ಕಂಡುಬರುತ್ತದೆ?
13. ಇಂದು ಒಬ್ಬನು "ಸಭೆಯನ್ನು" ಕಂಡುಕೊಳ್ಳಲು ಎಲ್ಲಿಗೆ ಹೋಗಬಹುದು?

© 2009 Truth for Today